Speed Post

ಕ್ರ.ಸಂಖ್ಯೆ:ಬಿ1:ಸಿಆರ್/43/ಟೆಂಡರ್ /18-19

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಕುದುರೆಮುಖ ವನ್ಯಜೀವಿ ವಿಭಾಗ,
ಕಾರ್ಕಳ, ದಿನಾಂಕ : 13.02.2019
ಟೆಲಿಫ್ಯಾಕ್ಸ್ : (08258) 298183.

ರಿಗೆ :

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಟೆಂಡರ್
ಬುಲೆಟಿನ್ ಅಧಿಕಾರಿಗಳು,
ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು
**ಚಿಕ್ಕಮಗಳೂರು ಜಿಲ್ಲೆ.**

ಮಾನ್ಯರೇ,

ವಿಷಯ : 2019-20ನೇ ಸಾಲಿನ ಕಾಮಗಾರಿಗಳ ಬಗ್ಗೆ ಸಂಕ್ಷಿಪ್ತ ಟೆಂಡರು ಪ್ರಕಟಣೆ.

ಉಲ್ಲೇಖ : ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999, 2000-ಆರ್ಡಿನೆನ್ಸ್ ನಂ. ಡಿಪಿಎಎಲ್:29:ಶಾಸನ: ಬೆಂಗಳೂರು, ದಿನಾಂಕ:19-08-2000

******

2019-20ನೇ ಸಾಲಿನಲ್ಲಿ ಕುದುರೆಮುಖ ವನ್ಯಜೀವಿ ವಿಭಾಗದ ಕುದುರೆಮುಖ ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಹೊರಗುತ್ತಿಗೆ ಮೂಲಕ ವಿವಿಧ ದಿನಗೂಲಿ ನೌಕರರ ಪೂರೈಕೆ ಬಗ್ಗೆ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಬಗ್ಗೆ ದಿನಾಂಕ: 15.03.2019 ರಂದು ಟೆಂಡರ್ ಕರೆಯಲಾಗಿದ್ದು, ಸದ್ರಿ ಟೆಂಡರಿನ ಹತ್ತು ಪ್ರತಿಗಳನ್ನು ಲಗ್ತೀಕರಿಸಿದೆ. ಮೇಲಿನ ಉಲ್ಲೇಖದ ಆದೇಶದ ಪ್ರಕಾರ ಈ ಬಗ್ಗೆ ಸೂಕ್ತ ಪ್ರಕಟಣೆಯನ್ನು ನೀಡಬೇಕಾಗಿ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕುದುರೆಮುಖ ವನ್ಯಜೀವಿ ವಿಭಾಗ,
ಕಾರ್ಕಳ

ಪ್ರತಿಯನ್ನು :

1. ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ ಮಂಡಿಸಲಾಗಿದೆ.
2. ಗೌರವಗಳೊಂದಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವೃತ್ತ, ಅಳಪೆ ಪಡೀಲು ಮಂಗಳೂರು ರವರಿಗೆ ಮಾಹಿತಿಗಾಗಿ ಮಂಡಿಸಲಾಗಿದೆ.
3. ಟೆಂಡರ್ ಪ್ರಕಟಣೆಯ ಪ್ರತಿಗಳೊಂದಿಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಕುಂದಾಪುರ ಹಾಗೂ ಕುದುರೆಮುಖ ಮತ್ತು ಈ ವಿಭಾಗದ ಎಲ್ಲಾ ವನ್ಯಜೀವಿ ವಲಯ ಅರಣ್ಯಾಧಿಕಾರಿಯವರಿಗೆ ಮಾಹಿತಿಗಾಗಿ ಹಾಗೂ ವ್ಯಾಪಕ ಪ್ರಚಾರಕ್ಕಾಗಿ ಕಳುಹಿಸಿದೆ.
4. ನೊಂದಾಯಿತ ಎಲ್ಲಾ ಗುತ್ತಿಗೆದಾರರಿಗೆ.

ದಿನಾಂಕ: 13-2-2019 ರಂದು ರವಾನಿಸಲಾಗಿದೆ.

Scanned by CamScanner

ಕರ್ನಾಟಕ ಸರಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ – 574 104
ಫೋನ್:08258-298183, ಫ್ಯಾಕ್ಸ್-08258-298183,

email: dcfwlkarkala@gmail.com

ಕ್ರ.ಸಂ.ಬಿ1:ಸಿಆರ್:43:2018-19 ದಿನಾಂಕ : 13-02-2019

## ಇ-ಟೆಂಡರ್ ಪ್ರಕಟಣೆ

ವಿಷಯ: 2019-20ನೇ ಸಾಲಿನಲ್ಲಿ ಕುದುರೆಮುಖ ವನ್ಯಜೀವಿ ವಿಭಾಗದ ಕುದುರೆಮುಖ ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು, ಲಿಪಿಕ ಸಹಾಯಕರು, ವಾಹನ ಚಾಲಕರು, ಜವಾನ, ರಾತ್ರಿ ಕಾವಲುಗಾರರು ಬೇಟೆ ತಡೆ ಕಾವಲುಗಾರರು, ಕೇರ್ ಟೇಕರ್ ಇತರ ಕಾವಲುಗಾರರು ಹಾಗೂ 'ಡಿ' ಗ್ರೂಪ್ ನೌಕರರ ಸೇವೆಯನ್ನು ಸೇವಾ ಸಂಸ್ಥೆ (Outsourcing) ಮೂಲಕ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ-ಟೆಂಡರ್ ಆಹ್ವಾನಿಸುವ ಬಗ್ಗೆ.

***************

ಕುದುರೆಮುಖ ವನ್ಯಜೀವಿ ವಿಭಾಗದ ಕುದುರೆಮುಖ ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು, ಲಿಪಿಕ ಸಹಾಯಕರು, ವಾಹನ ಚಾಲಕರು, ಜವಾನ, ರಾತ್ರಿ ಕಾವಲುಗಾರರು, ಬೇಟೆ ತಡೆ ಕಾವಲುಗಾರರು, ಕೇರ್ ಟೇಕರ್, ಇತರ ಕಾವಲುಗಾರರು ಹಾಗೂ, ಇತರ 'ಡಿ' ಗ್ರೂಪ್ ನೌಕರರು ಇವರುಗಳ ಸೇವೆ ಅವಶ್ಯವಿದ್ದು, 2019-20 ನೇ ಸಾಲಿನ ಆರ್ಥಿಕ ವರ್ಷದಲ್ಲಿ ದಿನಾಂಕ: 01-04-2019 ರಿಂದ 31-03-2020 ರವರೆಗೆ ಅಥವಾ ಮುಂದಿನ ಟೆಂಡರ್ ಪ್ರಕ್ರಿಯೆ ಮುಗಿಯುವ ವರೆಗೆ ನೊಂದಾಯಿತ ಸೇವಾ ಸಂಸ್ಥೆಯಿಂದ ಪಡೆದುಕೊಳ್ಳುವ ಅಂದರೆ, Outsourcing ಮೂಲಕ ಪಡೆಯಲು ಇ-ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ವಿವರ ಈ ಕೆಳಗಿನಂತಿದೆ.

| | |
|---|---|
| ಟೆಂಡರ್ ಷರತ್ತು ಸಂಬಂಧ ವಿವರ/ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: | 11-03-2019 ಅಪರಾಹ್ನ: 5.00 ಗಂಟೆ |
| ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | 15-03-2019 ಅಪರಾಹ್ನ: 4.00 ಗಂಟೆ |
| ತಾಂತ್ರಿಕ ಬಿಡ್ ತೆರೆಯುವ ದಿನಾಂಕ: | 16-03-2019 ಅಪರಾಹ್ನ 4.30 ಗಂಟೆ |
| ಆರ್ಥಿಕ ಬಿಡ್ ತೆರೆಯುವ ದಿನಾಂಕ: | 18-03-2019 ಅಪರಾಹ್ನ 4.30 ಗಂಟೆ |

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕುದುರೆಮುಖ ವನ್ಯಜೀವಿ ವಿಭಾಗ ಕಾರ್ಕಳ ಇವರ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

(ಕಛೇರಿ ದೂರವಾಣಿ ಸಂಖ್ಯೆ: 08258-298183)

ಉಪ ಅರಣ್ಯ ಸಂರಕ್ಷಣಾಧಿಕಾರಿ
ಕುದುರೆಮುಖ ವನ್ಯಜೀವಿ ವಿಭಾಗ
ಕಾರ್ಕಳ

Scanned by CamScanner